**<u>ಸಾಕ್ಷಿಯನ್ನು ದಿನಾಂಕ 04.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದಃ</u>**

1. ನಾನು 8 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಮದುವೆಯಾದಾಗಿನಿಂದ ತರಿಕೆರೆಯಲ್ಲಿ ವಾಸವಿದ್ದೇನೆ ಎಂದರೆ ಸರಿ. ನಾನು ಭದ್ರಾವತಿಯಲ್ಲಿ ಯಾವತ್ತು ವಾಸವಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ನನ್ನ ಸಂಬಂಧಿಕರು ಎಂದರೆ ಸರಿ.

2. ಹೇಮ್ಲಿಬಾಯಿ ನನ್ನ ದೊಡ್ಡಮ್ಮ ಎಂದರೆ ಸರಿ. ನನ್ನ ದೊಡ್ಡಮ್ಮ 2018 ರಲ್ಲಿ ಪಾರ್ಶ್ವವಾಯುವಿನಿಂದ ತೀರಿಕೊಂಡರು ಎಂದರೆ ಸರಿ. 2011 ರಿಂದ 2018 ರವರೆಗೆ ನನ್ನ ದೊಡ್ಡಮ್ಮ ಪಾರ್ಶ್ವವಾಯುನಿಂದ ಪೀಡಿತರಾಗಿ ಭದ್ರಾವತಿಯಲ್ಲಿ ಇದ್ದರು ಎಂದರೆ ಸಾಕ್ಷಿ ಶಿವಮೊಗ್ಗದಲ್ಲಿರುವ ಅವರ ಮಗಳಾದ 1 ನೇ ವಾದಿಯ ಜೊತೆ ವಾಸವಿದ್ದರು ಎನ್ನುತ್ತಾರೆ. 2011 ರಿಂದ 2018 ರವರೆಗೆ ಹೇಮ್ಲಿಬಾಯಿ ಭದ್ರಾವತಿಯ ಖಜಾನೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪಾರ್ಶ್ವವಾಯು ಪೀಡಿತರಾದ ಹೇಮ್ಲಿಬಾಯಿಯನ್ನು 1 ಮತ್ತು 2 ನೇ ಪ್ರತಿವಾದಿಯರೇ ನೋಡಿಕೊಂಡಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಪುನಃ ವಾದಿಯರ ಜೊತೆಯಲ್ಲಿಯೇ ಇದ್ದು, ಹೇಮ್ಲಿಬಾಯಿ ತೀರಿಕೊಂಡರು ಎನ್ನುತ್ತಾರೆ. ಭದ್ರಾವತಿಯಲ್ಲಿರುವ 1 ಮತ್ತು 2 ನೇ ಪ್ರತಿವಾದಿಯ ಮನೆಯಲ್ಲಿಯೇ ವಾಸವಿದ್ದು ಕೊಂಡು ಹೇಮ್ಲಿಬಾಯಿ ಕೆಲಸಕ್ಕೆ ಹೋಗುತ್ತಿದ್ದರು ಎನ್ನುವುದು ಸುಳ್ಳು. ಸಾಕ್ಷಿ ಪುನಃ ಆಕೆ

ಶಿವಮೊಗ್ಗದಿಂದ ಭದ್ರಾವತಿಗೆ ಓಡಾಡುತ್ತಿದ್ದರು ಎನ್ನುತ್ತಾರೆ.

3. ಹೇಮ್ಲಿಬಾಯಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಾನು ಆಗಾಗ ಬಂದು ಅವರನ್ನು ನೋಡಿಕೊಂಡು ಹೋಗುತ್ತಿದ್ದೆ, ಹಾಗಾಗಿ ಗೊತ್ತಿದೆ ಎನ್ನುತ್ತಾರೆ. ಹೇಮ್ಲಿಬಾಯಿ ಯಾರ ಹೆಸರಿಗೆ ಎಷ್ಟು ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. 2011 ರಿಂದ 2018 ರವರೆಗೆ ಹೇಮ್ಲಿಬಾಯಿಯ ವೈದ್ಯಕೀಯ ತಗಲಿದ ವೆಚ್ಚವನ್ನು 1 ಮತ್ತು 2 ನೇ ಪ್ರತಿವಾದಿಯೇ ಭರಿಸಿದ್ದಾರೆ ಎನ್ನುವುದು ಸುಳ್ಳು. ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 4 ರಿಂದ 6 ನೇ ಪ್ರತಿವಾದಿ ಪರ ಶ್ರೀ ಎಸ್ ಕೆ ವಕೀಲರಿಂದಃ**

4. ನನ್ನ ಮತ್ತು 4 ರಿಂದ 6 ನೇ ಪ್ರತಿವಾದಿಯ ನಡುವೆ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ. ನನ್ನ ತಂದೆಯ ಆಸ್ತಿಯನ್ನು ಅಕ್ರಮವಾಗಿ 4 ರಿಂದ 6 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಮಾಡಿಕೊಂಡಿದ್ದರಿಂದ ನಾನು ಅವರ ವಿರುದ್ಧ ದಾವೆ ಹಾಕಿದ್ದೆ. ಸದರಿ ದಾವೆ ತರಿಕೆರೆ ನ್ಯಾಯಾಲಯದಲ್ಲಿ ವಜಾ ಆಗಿದೆ. ಸದರಿ ವಜಾ ಆದೇಶದ ವಿರುದ್ಧ ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ಸಹ ವಜಾ ಆಗಿದೆ ಎಂದರೆ ಸರಿ. ನಾನು ಹೇಳಿದಂತೆ 4 ರಿಂದ 6 ನೇ ಪ್ರತಿವಾದಿಯರು ಮೋಸದಿಂದ ದಾಖಲೆ ಮಾಡಿಕೊಂಡಿಲ್ಲ ಎಂದು ಸಾಬೀತಾದ ಕಾರಣ ನ್ಯಾಯಾಲಯ ನನ್ನ ದಾವೆ ವಜಾ ಮಾಡಿದೆ ಎನ್ನುವುದು ಸರಿಯಲ್ಲ.

5. ಬೇಲೇನಹಳ್ಳಿಯಲ್ಲಿರುವ ಮನೆಯ ಸಂಬಂಧವಾಗಿಯೂ 4 ರಿಂದ 6 ನೇ ಪ್ರತಿವಾದಿಯ ನಡುವೆ ವಿವಾದ ಇದೆ ಎಂದರೆ ಸರಿ. ಸದರಿ ವಿವಾದ ಸಂಬಂಧ ತರಿಕೆರೆ ನ್ಯಾಯಾಲಯದಲ್ಲಿ ದಾವೆ ಸಹ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ವಿವಾದಿತ ಮನೆ ಇರುವ ನಿವೇಶನ ನನ್ನ ತಂದೆಯ ತಾಯಿಯಾದ ಭೀಮ್ಲಿಬಾಯಿರವರಿಗೆ ಮಂಜೂರಾಗಿತ್ತು. ಆ ಬಗ್ಗೆ ದಾಖಲೆ ಇಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಮಂಜೂರಾತಿ ಯಾರಿಗೂ ಆಗಿಲ್ಲ, ಅವರವರು ಸ್ವಾಧೀನದಲ್ಲಿದ್ದರು ಎನ್ನುತ್ತಾರೆ. ವಿವಾದಿತ ನಿವೇಶನ 4 ರಿಂದ 6 ನೇ ಪ್ರತಿವಾದಿಯರ ತಂದೆ ಸೋಮ್ಲಾನಾಯ್ಕನ ಹೆಸರಿಗೆ ಮಂಜೂರಾಗಿತ್ತು ಮತ್ತು ಸದರಿ ನಿವೇಶನವನ್ನು ಲಪಾಟಾಯಿಸುವ ಉದ್ದೇಶದಿಂದ ಸದರಿ ಪ್ರತಿವಾದಿಯ ವಿರುದ್ಧ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

6. ಮೇಲೆ ಹೇಳಿದ ಜಮೀನು ಮತ್ತು ನಿವೇಶನಗಳ ಸಂಬಂಧ ನನ್ನ ಮತ್ತು 4 ರಿಂದ 6 ನೇ ಪ್ರತಿವಾದಿಯ ನಡುವೆ ದ್ವೇಶ ಇದೆ ಎಂದರೆ ಸರಿ. ಈ ದಾವೆಯಲ್ಲಿ ನಾನು ಸಲ್ಲಿಸಿರುವ ನನ್ನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಹಾಗೂ 4 ರಿಂದ 6 ನೇ ಪ್ರತಿವಾದಿಯರ ನಡುವೆ ಈ ಹಿಂದೆ ನಡೆದಿರುವ ವ್ಯಾಜ್ಯದ ಬಗ್ಗೆಯಾಗಲೀ ಮತ್ತು ನಮ್ಮ ನಡುವಿನ ವಿವಾದ ಬಗ್ಗೆಯಾಗಲೀ ನಾನು ಬರೆಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನ್ನನ್ನು ಕೇಳಿಲ್ಲ ಎನ್ನುತ್ತಾರೆ. ಜಮೀನಿನ ಸಂಬಂಧ ವೈಶಮ್ಯ ಇಟ್ಟುಕೊಂಡು 4 ರಿಂದ 6 ನೇ ಪ್ರತಿವಾದಿಯರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ವಾದಿಯರು ತಮ್ಮ ಕುಟುಂಬದ ವ್ಯವಹಾರವನ್ನು ಯಾವ ರೀತಿ ಮಾಡಿಕೊಳ್ಳುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಹೇಮ್ಲಿಬಾಯಿಗೆ ಭದ್ರಾವತಿಯ ಎಸ್ ಬಿ ಐ ಬ್ಯಾಂಕಿನಲ್ಲಿ ಖಾತೆ

ಇತ್ತು. ಸಾಕ್ಷಿ ಸ್ವ ಇಚ್ಛೆಯಿಂದ ಹೇಮ್ಲಿಬಾಯಿ ಅವಿದ್ಯಾವಂತಳಾಗಿದ್ದು, ಸಹಿ ಮಾಡುವುದನ್ನು ಮಾತ್ರ ಕಲಿತ್ತಿದ್ದರು, ಬ್ಯಾಂಕ್ ವ್ಯವಹಾರ ಮಾಡುತ್ತಿರಲಿಲ್ಲ ಎನ್ನುತ್ತಾರೆ. ಹೇಮ್ಲಿಬಾಯಿ ಭಧ್ರಾವತಿಯಲ್ಲಿ ಮೊದಲು ತನ್ನ ಮಕ್ಕಳಾದ ವಾದಿಯರ ಜೊತೆ ವಾಸವಿದ್ದರು, ವಾದಿಯರ ಮದುವೆಯಾದ ನಂತರ ಒಬ್ಬರೇ ಇದ್ದರು. 1 ನೇ ವಾದಿಯ ಮದುವೆಯಾಗಿ ಸುಮಾರು 26-28 ವರ್ಷಗಳ ಹಿಂದೆ ಆಗಿತ್ತು. ಮದುವೆಯಾದ ನಂತರ ಆಕೆ ತನ್ನ ಗಂಡನ ಜೊತೆ ಶಿವಮೊಗ್ಗದಲ್ಲಿ ವಾಸವಿದ್ದಾರೆ. 2 ನೇ ಪ್ರತಿವಾದಿಗೆ 19 ವರ್ಷಗಳ ಹಿಂದೆ ಮದುವೆಯಾಗಿದೆ.

8. ವಾದಿಯರ ಮದುವೆಯಾದ ನಂತರ ಏಕಾಂಗಿಯಾಗಿದ್ದ ಹೇಮ್ಲಿಬಾಯಿ ಆಕೆಯ ವೈಯಕ್ತಿಕ ವ್ಯವಹಾರ ಮತ್ತು ಬ್ಯಾಂಕ್ ವ್ಯವಹಾರವನ್ನು ಒಬ್ಬಳೇ ನಿಬಾಯಿಸುತ್ತಿದ್ದಳು ಎಂದರೆ ಸಾಕ್ಷಿ ವಾದಿಯರು ತಿಂಗಳಿಗೊಮ್ಮೆ ಬಂದು-ಹೋಗುತ್ತಿದ್ದರು ಮತ್ತು ಅವರೇ ಮನೆಗೆ ಅವಶ್ಯಕ ಸಾಮಗ್ರಿಗಳನ್ನು ತಂದು ಹಾಕುತ್ತಿದ್ದರು. ಹೇಮ್ಲಿಬಾಯಿಯ ಸಂಬಳ ಬ್ಯಾಂಕ್ ಖಾತೆಗೆ ಹೋಗುತ್ತಿತ್ತು ಎಂದರೆ ಸರಿ. ಸದರಿ ಬ್ಯಾಂಕ್ ಖಾತೆಯ ವ್ಯವಹಾರವನ್ನು ವಾದಿಯರೇ ನೋಡಿಕೊಳ್ಳುತ್ತಿದ್ದರು.

9. ಈ ದಾವೆಯನ್ನು ಹಣದ ವಿಚಾರವಾಗಿ ದಾಖಲಿಸಲಾಗಿದೆ. ಹೇಮ್ಲಿಬಾಯಿಗೆ ಸಂಬಂಧಪಟ್ಟ ಹಣಕ್ಕೂ 4 ರಿಂದ 6 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ. ಸದರಿ ಹಣಕಾಸಿನ ವಿಚಾರವಾಗಿ ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

10. 4 ರಿಂದ 6 ನೇ ಪ್ರತಿವಾದಿಯರ ತಂದೆ ಸೋಮ್ಲಾಬಾಯಿಯರವರು ಮೊದಲು ಅರಣ್ಯ ಇಲಾಖೆಯಲ್ಲಿ, ಆ ನಂತರ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡಿದ್ದರು. ಅವರು

ಯಾವ ಕೆಲಸದಲ್ಲಿದ್ದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಸೋಮ್ಲಾನಾಯ್ಕರವರ ಆದಾಯದ ಬಗ್ಗೆ ನನಗೆ ಗೊತ್ತಿಲ್ಲ. ಅವರು ಏಲ್ಲೆಲ್ಲಿ ಕೆಲಸ ಮಾಡಿದ್ದರು ಎನ್ನುವುದು ಗೊತ್ತು. ಸೋಮ್ಲಾನಾಯ್ಕರವರು ವೃತ್ತಿಯಲ್ಲಿದ್ದಾಗ ಮೋಸ ಮಾಡಿದ್ದರಿಂದ ಅವರ ವಿರುದ್ಧ ಇಲಾಖೆಯ ವಿಚಾರಣೆ ನಡೆದಿತ್ತು. ಸೋಮ್ಲಾನಾಯ್ಕರವರ ವಿರುದ್ಧ ಅವರ ಇಲಾಖೆಗೆ ನಾನು ಸಹ ದುೂರು ಕೊಟ್ಟಿದ್ದೆ. ಸಾಕ್ಷಿ ಸ್ವ ಇಚ್ಚೆಯಿಂದ ಸೋಮ್ಲಾನಾಯ್ಕ ನನ್ನ ಗಂಡನನ್ನು ಕೊಲೆ ಮಾಡಿಸಿದ್ದರು ಎನ್ನುತ್ತಾರೆ. ಇಲಾಖೆ ವಿಚಾರಣೆ ನಡೆದು ಸೋಮ್ಲಾನಾಯ್ಕ ನಿರಾಪರಾಧಿ ಎಂದು ತೀರ್ಮಾನ ಆಗಿತ್ತು ಎನ್ನುವುದು ಸರಿಯಲ್ಲ. ಸೋಮ್ಲಾನಾಯ್ಕ ವಯೋ ಸಹಜ ನಿವೃತ್ತಿ ಹೊಂದಿದ್ದರು ಎಂದರೆ ಸಾಕ್ಷಿ ಸ್ವಯಂ ನಿವೃತ್ತಿ ಹೊಂದಿದ್ದರು ಎನ್ನುತ್ತಾರೆ. ಸೋಮ್ಲಾನಾಯ್ಕನಿಗೆ 58 ನೇ ವಯಸ್ಸಿನಲ್ಲಿ 2 ಬಾರಿ ಹೃದಯಾಘಾತ ಆಗಿತ್ತು ಎಂದರೆ ಸರಿ. ಸಾಕ್ಷಿ ಸ್ವ ಇಚ್ಚೆಯಿಂದ ಹಲವರಿಗೆ ಮೋಸ ಮಾಡಿದ್ದರಿಂದ ಆ ರೀತಿ ಆಗಿದೆ ಎನ್ನುತ್ತಾರೆ. 2 ಬಾರಿ ಹೃದಯಾಘಾತ ಆದ ನಂತರ ಸೋಮ್ಲಾನಾಯ್ಕ ಚಿಕಿತ್ಸೆ ಪಡೆದು ಸ್ವಲ್ಪ ಕಾಲ ಕೆಲಸ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಂತರ ಅನಾರೋಗ್ಯದ ಕಾರಣ ಸ್ವಯಂ ನಿವೃತ್ತಿ ಪಡೆದಿದ್ದರು ಎನ್ನುವುದು ಸುಳ್ಳು.

11. 2005 ರಿಂದಲೂ ನನ್ನ ಮತ್ತು 4 ರಿಂದ 6 ನೇ ಪ್ರತಿವಾದಿಯ ಕುಟುಂಬದ ನಡುವೆ ಅತೀವ ವೈಶಮ್ಯ ಇದೆ ಎಂದರೆ ಸರಿ. ಸಾಕ್ಷಿ ಪುನಃ ಪ್ರತಿವಾದಿಯರೇ ವಿನಹಃ ಕಾರಣ ಗಲಾಟೆ ಮಾಡುತ್ತಿದ್ದಾರೆ ಎನ್ನುತ್ತಾರೆ. ನಮ್ಮ ಕುಟುಂಬಕ್ಕೆ ತೊಂದರೆಯಾದಾಗಲೆಲ್ಲಾ 4 ರಿಂದ 6 ನೇ ಪ್ರತಿವಾದಿಯರು ಮತ್ತು ಅವರ ತಂದೆಯ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ

ಸಾಕ್ಷಿ ನನ್ನ ಗಂಡನನ್ನು ಕೊಲೆ ಮಾಡಿಸಿ ನಮ್ಮ ಕುಟುಂಬಕ್ಕೆ ತೊಂದರೆ ಕೊಟ್ಟಿದ್ದರಿಂದ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. 4 ರಿಂದ 6 ನೇ ಪ್ರತಿವಾದಿಯರು ನನ್ನ ಗಂಡನನ್ನು ಕೊಲೆ ಮಾಡಿಸಿದ್ದಾರೆಂದು ಅವರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿಲ್ಲ. 4 ರಿಂದ 6 ನೇ ಪ್ರತಿವಾದಿಯರ ವಿರುದ್ಧ ಸಿವಿಲ್ ದಾವೆ ಸಲ್ಲಿಸಿ ಆಸ್ತಿ ಲಪಾಟಾಯಿಸಲು ನಾನು ಪಟ್ಟ ಪ್ರಯತ್ನ ವಿಫಲವಾಗಿದ್ದರಿಂದ ಅವರಿಗೆ ತೊಂದರೆ ಕೊಡುವ ಸಲುವಾಗಿ ವಾದಿಯರ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ಸೋಮ್ಲಾನಾಯ್ಕನ ಒಟ್ಟು ಕುಟುಂಬದಲ್ಲಿ 5 ಜನ ಸದಸ್ಯರಿದ್ದರು. ಸದರಿ ಒಟ್ಟು ಕುಟುಂಬಕ್ಕೆ ಯಾವುದೇ ಆಸ್ತಿ ಇರಲಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ನನ್ನ ತಂದೆ ಕೂಡ್ಲಿ ಮಠಕ್ಕೆ ಸೇರಿದ ಅಸ್ತಿಯನ್ನು ಅನಧೀಕೃತ ಸ್ವಾಧೀನ ಮಾಡಿದ್ದರು ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 77/2006 ರಂತೆ ನಾನು ಸಲ್ಲಿಸಿದ್ದ ದಾವೆಯಲ್ಲಿ ಒಟ್ಟು ಕುಟುಂಬದ ಸದಸ್ಯರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಒಟ್ಟು ಕುಟುಂಬದ ಆಸ್ತಿ ಸಂಬಂಧ ದಾವೆ ಹಾಕಿರಲಿಲ್ಲ ಎನ್ನುತ್ತಾರೆ. ಒಟ್ಟು ಕುಟುಂಬದ ಆಸ್ತಿಗಳ ಸಂಬಂಧ ಸೋಮ್ಲಾನಾಯ್ಕ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎನ್ನುವುದು ಸರಿಯಲ್ಲ. ಒಟ್ಟು ಕುಟುಂಬದ ಸದಸ್ಯರಿಗೆ ವಂಚಿಸಿ ತಮ್ಮ ಹೆಸರಿಗೆ ಆಸ್ತಿ ದಾಖಲೆ ಮಾಡಿಕೊಂಡಿದ್ದಾರೆಂದು ನಾನು ಬರೆಸಿರುವುದು ಸುಳುಳ ಎನ್ನುವುದು ಸರಿಯಲ್ಲ. ಒಟ್ಟು ಕುಟುಂಬಕ್ಕೆ ಯಾವುದೇ ಆಸ್ತಿ ಇಲ್ಲದ ಕಾರಣ ಯಾವುದೇೀ ದಾಖಲೆ ಸೃಷ್ಟಿ ಮಾಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಸೋಮ್ಲಾನಾಯ್ಕ ದಾಖಲೆ ಸೃಷ್ಟಿ ಮಾಡಿದ್ದರು ಎನ್ನುತ್ತಾರೆ.

13. ಈ ದಾವೆಯ ಸಂಬಂಧ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸೋಮ್ಲಾನಾಯ್ಕ ಮತ್ತು 4 ರಿಂದ 6 ನೇ ಪ್ರತಿವಾದಿಯ ಮೇಲಿನ ದ್ವೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**

**1 ನೇ ಹೆಚ್ಚುವರಿ/ ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**

**ಸಾಕ್ಷಿ ತನಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ ಮತ್ತು ಕೇವಲ ತೆಲುಗು ಭಾಷೆ ಮಾತನಾಡುವುದರಿಂದ ತೆಲುಗು ಮತ್ತು ಕನ್ನಡ ಎರಡೂ ಭಾಷೆಯನ್ನು ಮಾತನಾಡುವ ಮತ್ತು ನ್ಯಾಯಾಲಯದಲ್ಲಿ ಹಾಜರಿರುವ ಶ್ರೀ ಜಗನ್ನಾಥ ಎಸ್.ಕೆ. ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಕ ಮಾಡಿಕೊಂಡು ಸಾಕ್ಷಿಗೆ ತೆಲುಗಿನಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.**

**(ಸಾಕ್ಷಿ ತೆಲುಗು ಭಾಷೆಯಲ್ಲಿ ಹೇಳಿದ್ದನ್ನು ಭಾಷಾಂತರಕಾರರು ಹಾಗೂ ವಕೀಲರಾದ ಶ್ರೀ ಜಗನ್ನಾಥ ಎಸ್.ಕೆ. ರವರು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿದ್ದನ್ನು ದಾಖಲಿಸಿಕೊಳ್ಳಲಾಗಿದೆ.)**